**ಓ ಎಸ್ ನಂ: 329/2020**

**ಪಿ. ಡಬ್ಲ್ಯೂ ಃ 5**

**ದಿಃ 18.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎನ್ ಎಸ್ ಎಸ್ ವಕೀಲರಿಂದ**

**ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸದರಿ ಪ್ರಮಾಣ ಪತ್ರಿಕೆಯನ್ನು ನನ್ನ ಮುಖ್ಯ ವಿಚಾರಣೆ ಎಂದು ತೆಗೆದುಕೊಳ್ಳಬೇಕು ಎಂದು ಕೋರುತ್ತೇನೆ.**

ನಾನು ನಿ ಪಿ 3 ರಲ್ಲೂ ಕೂಡ ಸಾಕ್ಷಿಯಾಗಿ ಸಹಿ ಮಾಡಿದ್ದು ಅದನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ನಿ ಪಿ 3 ಬಿ ಎಂದು ಗುರುತಿಸಲಾಯಿತು. ನಿ ಪಿ 4 ಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿದ್ದೇನೆಂದು ಸಾಕ್ಷಿ ತನ್ನ ಸಹಿಯನ್ನು ಗುರುತಿಸಿದ್ದು ಅದನ್ನು ನಿ ಪಿ 4 ಬಿ ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಕೃಷ್ಣಪ್ಪ ನವರು ಹೆಬ್ಬೆಟ್ಟಿನ ಗುರುತನ್ನು ನಿ ಪಿ 3 ಮತ್ತು ನಿ ಪಿ4 ರಲ್ಲಿ ಹಾಕಿದ್ದು ಅದನ್ನು ನೋಡಿದರೆ ಗುರುತಿಸುತ್ತೇನೆ. **ಅದನ್ನು ಈಗಾಗಲೇ ನಿ ಪಿ 3 ಎ ಮತ್ತು ನಿ ಪಿ 4 ಎ ಎಂದು ಗುರುತಿಸಲಾಗಿದೆ. ಸದರಿ ನಿ ಪಿ 4 ರ ಪ್ರತಿ ಪುಟದಲ್ಲೂ ಹೆಬ್ಬೆಟ್ಟಿನ ಗುರುತು ಇರುತ್ತದೆ.**

**ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಎಂ ಜಿ ಆರ್ ವಕೀಲರಿಂದ ಃ**

ನಾನು ಎರಡನೇ ಪಿ ಯು ಸಿ ವರೆವಿಗೂ ಓದಿರುತ್ತೇನೆ. ರಾಮಯ್ಯ ನವರ ಕುಟುಂಬ ಎಷ್ಟು ವರ್ಷಗಳಿಂದ ನನಗೆ ಗೊತ್ತಿರುತ್ತದೆ ಎಂದರೆ ಸಾಕ್ಷಿ ಕೃಷ್ಣಪ್ಪ ನವರು ನನ್ನ ತಂದೆ ನರಸಿಂಹಯ್ಯ ನವರಿಗೆ ಪರಿಚಯ ಇರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ನರಸಿಂಹಯ್ಯ ನವರು ಬದುಕಿರುತ್ತಾರೆ. ಕೃಷ್ಣಪ್ಪನವರ ವಿದ್ಯಾಭ್ಯಾಸದ ಬಗ್ಗೆ ನನಗೆ ಗೊತ್ತಿಲ್ಲ. ಆದರೆ ಅವರು ಹೆಬ್ಬೆಟ್ಟು ಹಾಕುತ್ತಾರೆ. ನನಗೆ ಕೃಷ್ಣಪ್ಪನವರ ವೈಯಕ್ತಿಕ ಪರಿಚಯ ನನ್ನ ತಂದೆಯವರ ಕಡೆಯಿಂದ ಇರುತ್ತದೆ. ನನ್ನ ತಂದೆ ಅವರ ಮನೆಗೆ ಹೋಗಿ ಬರುವುದನ್ನು ಮಾಡುತ್ತಿದ್ದರು.

ನಾನು ಕೃಷ್ಣಪ್ಪ ನವರನ್ನು ಸುಮಾರು 20 ವರ್ಷಗಳಿಂದ ಮಾತನಾಡುವುದು ಮಾಡುತ್ತಿದ್ದೇನೆ.

ಕೃಷ್ಣಪ್ಪನವರಿಗೆ ಸರ್ಕಾರದಿಂದ ಬರುತ್ತಿದ್ದ ಮಾಶಾಸನದ ಬಗ್ಗೆ ನನಗೆ ಗೊತ್ತಿಲ್ಲ. ಕೃಷ್ಣಪ್ಪನವರಿಗೆ ಕಿವಿ ಕೇಳಿಸುತ್ತಿರಲಿಲ್ಲ ಅವರನ್ನು ಊರಿನವರು ಯಾ ಯಾ ಎಂದು ಕರೆಯುತ್ತಿದ್ದರು ಎಂದರೆ ಸಾಕ್ಷಿ ಅವರಿಗೆ ಕಿವಿ ಕೇಳಿಸುತ್ತಿತ್ತು ಎಂದು ನುಡಿಯುತ್ತಾರೆ. ತ್ಯಾಮಗೊಂಡಲಿನ ನಿಸರ್ಗ

ಬಾರ್ ಮತ್ತು ರೆಸ್ಟೋರೆಂಟ್ ನಲ್ಲಿ ನಾನು ಪಾರ್ಟರ್ ಎಂದರೆ ಸರಿ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸಾಕ್ಷಿ ಸದರಿ ದಾಖಲಾತಿಯನ್ನು **ಸಾಕ್ಷಿ ನೋಡಿ ಸದರಿ ದಾಖಲಾತಿ ಆರ್ ಟಿ ಐ ಅಡಿಯಲ್ಲಿ ಬಂದಿರುವ ಹಿಂಬರಹ ಎಂದು ಗುರುತಿಸಿದ್ದು ಅದನ್ನು ಸಾಕ್ಷಿ ಗುರುತಿಸಿದ ಮೇರೆಗೆ ನಿ ಡಿ 22 ಎಂದು ಗುರುತಿಸಲಾಯಿತು.**

ನನ್ನ ಹೆಂಡತಿ ಹೆಸರಿನಲ್ಲಿ ಒಂದು ಆಸ್ತಿಯನ್ನು ನಾನು ಖರೀದಿಸಿರುವುದಾಗಿ ಒಂದು ದಾಖಲಾತಿಯನ್ನು **ನಾನು ಈಗ ನೋಡುತ್ತಿದ್ದು ಆ ದಾಖಲಾತಿಯನ್ನು ಸಾಕ್ಷಿ ಗುರುತಿಸಿದ ಮೇರೆಗೆ ನಿ ಡಿ 23 ಎಂದು ಗುರುತಿಸಲಾಯಿತು. ನಾನು ಕೃಷ್ಣಪ್ಪನವರ ಕುಟುಂಬದಿಂದ ಬಾರ್ ನಲ್ಲಿ ಹೂಡಿಕೆ ಮತ್ತು ಸದರಿ ಆಸ್ತಿ ಖರೀದಿ ಮಾಡುವ ಸಮಯದಲ್ಲಿ ಸಹಾಯ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸುಳ್ಳು ಮಾಹಿತಿಯನ್ನು ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.**

ದಿನಾಂಕಃ 3.12.2008 ರಲ್ಲಿ ಕೃಷ್ಣಪ್ಪನವರು ಒಬ್ಬರೇ ಬಂದು ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ. ಅ ದಿನ ಸುಮಾರು 10-30/11 ಗಂಟೆಗೆ ನಾನು ಅವರ ಜೊತೆ ಹೋಗಿರುತ್ತೇನೆ. ನಾನು ಮತ್ತು ಕೃಷ್ಣಪ್ಪನವರು ತಾವರೇಕೆರೆಯ ಉಪ ನೋಂದಣಾದಿಕಾರಿಗಳ ಕಚೇರಿಗೆ ಹೋಗಿರುತ್ತೇವೆ. ಆ ದಿನ ನಮ್ಮ ಜೊತೆ ಸ್ಟ್ಯಾಂಪ್ ವೆಂಡರ್ ಆದ ಶಂಕರೇಗೌಡ ರವರು ಕೂಡ ಬಂದಿದ್ದರು. ಸದರಿ ದಿನ ವಿಲ್ ರದ್ದತಿ ಪತ್ರಕ್ಕೆ ಮತ್ತು ಹೊಸ ವಿಲ್ ನೋಂದಣಿ ಮಾಡಿಸಲು ಕೃಷ್ಣಪ್ಪನವರೇ ಮಾಹಿತಿ ನೀಡಿದ್ದರು. ಸ್ಟ್ಯಾಂಪ್ ಪೇಪರ್ ನ್ನು ಯಾರು ತಂದರು, ಎಲ್ಲಿಂದ ತಂದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಲ್ ನ್ನು ಶಂಕರೇಗೌಡರು ತಯಾರಿ ಮಾಡಿ, ಕೃಷ್ಣಪ್ಪನವರಿಗೆ ಓದಿ ಹೇಳಿದ್ದರು. ಶಂಕರೇಗೌಡರಿಗೆ ವಿಲ್ ತಯಾರಿಸಲು ಯಾರು ಮಾಹಿತಿ ಕೊಟ್ಟರು ಎಂದು ನನಗೆ ಗೊತ್ತಿಲ್ಲ. ನಾನು ಹೋಗುವಷ್ಟರಲ್ಲಿ ವಿಲ್ ತಯಾರಾಗಿದ್ದು, ನಾನು ಅದಕ್ಕೆ ಸಹಿ ಮಾಡಿರುತ್ತೇನೆ. ವಿಲ್ ಎಷ್ಟು ರೂಪಾಯಿಗಳ ಸ್ಟ್ಯಾಂಪ್ ಪೇಪರ್ ಮೇಲೆ ಇತ್ತು ಎಂದು ಗೊತ್ತಿಲ್ಲ, ಎಷ್ಟು ಹಾಳೆ ಇತ್ತು ಎಂದು ನನಗೆ ಗೊತ್ತಿಲ್ಲ.

ಸದರಿ ವಿಲ್ ನಲ್ಲಿ ಸ.ನಂ. 178/11 ಕ್ಕೆ ಸಂಬಂದಪಟ್ಟ ಮಾಹಿತಿ ಇತ್ತು. ಅದರ ಚೆಕ್ ಬಂದಿ ನಾನು ಈಗ ಮರೆತಿರುತ್ತೇನೆ. ಸದರಿ ವಿ ಲ್ ನ್ನು ಸಹಿ ಮಾಡುವ ಮುಂಚೆ ಶಂಕರೇಗೌಡರು ಒಂದು ಬಾರಿ ಓದಿದರು ಮತ್ತು ನಾನು ಕೂಡ ಅದನ್ನು ಒಂದು ಬಾರಿ ಓದಿ ಸಹಿ ಮಾಡಿರುತ್ತೇನೆ. ವಿಲ್ ಓದಿ ಸಹಿ ಮಾಡಿದಾಗ ಸಮಯ ಸುಮಾರು 12 ಗಂಟೆ ಆಗಿರಬಹುದು. ಉಪ ನೋಂದಣಾಧಿಕಾರಿಗಳ

ಕಚೇರಿಗೆ ಹೋಗಿ ಸಹಿ ಮಾಡುವ ಮುಂಚೆ ಮತ್ತೊಮ್ಮೆ ಕೃಷ್ಣಪ್ಪನವರಿಗೆ ವಿಲ್ ನಲ್ಲಿ ಇರುವ ವಿಷಯವನ್ನು ಓದಿ ಹೇಳಿದ್ದರು. ಆ ದಿನ ವಿಲ್ ನ್ನು ಓದಿ ಹೇಳಿದ ನಂತರ ಉಪ ನೋಂದಣಾಧಿಕಾರಿ ವಿಲ್ ನ್ನು ಓದಿ ಹೇಳಿರುವುದಕ್ಕೆ ವಿಲ್ ನಲ್ಲಿ endorsement ಮಾಡಿರುತ್ತಾರಾ ಎಂದರೆ ಗೊತ್ತಿಲ್ಲ.

ಕೃಷ್ಣಪ್ಪ ನವರಿಗೆ ಕಿವಿ ಕೇಳಿಸುತ್ತಿರಲಿಲ್ಲ ಎಂದರೆ ಸಾಕ್ಷಿ ಅವರಿಗೆ ಕಿವಿ ಕೇಳಿಸುತ್ತಿತ್ತು ಎಂದು ನುಡಿಯುತ್ತಾರೆ. ಕೃಷ್ಣಪ್ಪ ನವರಿಗೆ ಕಿವಿ ಕೇಳಿಸುತ್ತಿಲ್ಲ ಎನ್ನುವ ವಿಷಯ ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಅವರಿಗೆ ಕಿವಿ ಕೇಳಿಸುತ್ತಿತ್ತು ಎಂದು ನುಡಿಯುತ್ತಾರೆ. ಸರ್ಕಾರದವರು ಕೃಷ್ಣಪ್ಪ ನವರಿಗೆ ಮಾಶಾಸನ ವನ್ನು ಕೊಡುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಮನೆಯ ವಿಚಾರ, ಮಾಶಾಸನದ ವಿಚಾರ ನನಗೆ ಗೊತ್ತಿರುವುದಿಲ್ಲ. ಕೃಷ್ಣಪ್ಪ ನವರಿಗೆ ಕಿವುಡುತನ ಇದ್ದ ವಿಚಾರ ನನಗೆ ಗೊತ್ತಿದ್ದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ ಃ 03.12.2008 ರಂದು ವಿಲ್ ನ್ನು ಯಾರು ಬರೆದರು, ಎಷ್ಟು ವಿಲ್ ಗಳನ್ನು ಬರೆದರು ಎಂದು ನನಗೆ ಗೊತ್ತಿಲ್ಲವೆಂದು ಮೊದಲಿಗೆ ಹೇಳಿ ನಂತರ ಸಾಕ್ಷಿ 4 ಜನರಿಗೆ ಆ ದಿನ ವಿಲ್ ಮಾಡಲಾಗಿತ್ತು ಎಂದು ನುಡಿಯುತ್ತಾರೆ.

ಶಂಕರೇಗೌಡರು ಆ ದಿನ ಬೆಳಿಗ್ಗೆ 10 ಗಂಟೆಗೆ ಬಂದಿದ್ದರು. ಶಂಕರೇಗೌಡರು ವಕೀಲರು ಮತ್ತು ಸ್ಟ್ಯಾಂಪ್ ವೆಂಡರ್ ಅಗಿದ್ದರು. ಆ ದಿನವೇ ನಾನು ಅವರನ್ನು ಮೊದಲ ಬಾರಿ ನೋಡಿರುತ್ತೇನೆ. ಶಂಕರೇಗೌಡರ ಕಚೇರಿಗೆ ನಾನು ಹೋಗಿರುವುದಿಲ್ಲ. ಕೃಷ್ಣಪ್ಪನವರು ಅವಿದ್ಯಾವಂತರು ಎಂದರೆ ಸರಿ. ವಿಲ್ ನಲ್ಲಿ ಉಪಯೋಗಿಸಿರುವ ಪದಗಳು ಕೃಷ್ಣಪ್ಪನವರು ಅವಿದ್ಯಾವಂತರಾದ ಕಾರಣ ಅವರು ಉಪಯೋಗಿಸಿರುವ ಪದಗಳು ವಿಲ್ ನಲ್ಲಿ ಇರುವುದಿಲ್ಲ ಮತ್ತು ಬರೆದಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಹೇಳಿ ಬರೆಯಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಿಲ್ ನಲ್ಲಿ ಉಪಯೋಗಿಸಿರುವ ಪದಗಳ ಬಳಕೆ ಕೃಷ್ಣಪ್ಪನವರಿಗೆ ಬಳಸುವ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿ.

ವಿಲ್ ಆಗುವ 2-3 ವರ್ಷಗಳಿಂದ ಕೃಷ್ಣಪ್ಪನವರು ಕಾಯಿಲೆಯಿಂದ ಹಾಸಿಗೆ ಹಿಡಿದಿದ್ದರು ಎಂದರೆ ಗೊತ್ತಿಲ್ಲ. ವಿಲ್ ಆಗುವ ಸಮಯದಲ್ಲಿ ಕೃಷ್ಣಪ್ಪ ನವರು ಯಾವ ರೀತಿ ಇದ್ದರು ಎಂದರೆ ಚೆನ್ನಾಗಿದ್ದರು ಎಂದು ನುಡಿಯುತ್ತಾರೆ. ಕೃಷ್ಣಪ್ಪನವರು ವಿಲ್ ಆಗುವ ದಿನಕ್ಕೆ 2/3 ವರ್ಷಗಳಿಂದ ಕೆಂಗೇರಿಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸಮಯದಲ್ಲಿ ನಾನೇನಾದರೂ ಅಸ್ಪತ್ರೆಗೆ ಭೇಟಿ ನೀಡಿದ್ದೇನೆ ಎಂದರೆ ನನಗೆ ಅವರು ಆಸ್ಪತ್ರೆಯಲ್ಲಿ ಇದ್ದ ವಿಚಾರ ಗೊತ್ತಿರುವುದಿಲ್ಲ. ಕೃಷ್ಣಪ್ಪ ನವರು ಕೆಂಗೇರಿಯ ರಾಜರಾಜೇಶ್ವರಿ ಆಸ್ಪತ್ರೆ , ಕೆಂಗೇರಿಯ ಕಿಡ್ನಿ ಆಸ್ಪತ್ರೆಯ , ತಾವರೇಕೆರೆಯ ಅಮ್ಮ

ಅಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು ಈ ವಿಚಾರ ನನಗೆ ಗೊತ್ತಿದೆಯೋ ಎಂದು ಪ್ರಶ್ನಿಸಿದರೆ ಗೊತ್ತಿಲ್ಲವೆಂದು ನುಡಿಯುತ್ತಾರೆ.

ಕೃಷ್ಣಪ್ಪ ನವರಿಗೆ ಮಾನಸಿಕ ಮತ್ತು ದೈಹಿಕ ಆರೋಗ್ಯ ಇರಲಿಲ್ಲ ಎಂದರೆ ಸಾಕ್ಷಿ ಅವರು ಓಡಾಡಿಕೊಂಡು ಆ ದಿನ ಬಂದಿದ್ದರು ಎಂದು ನುಡಿಯುತ್ತಾರೆ. ವಿಲ್ ನಲ್ಲಿ ಕೃಷ್ಣಪ್ಪ ನವರು ಅವರ ಮಾನಸಿಕ ಮತ್ತು ದೈಹಿಕ ಆರೋಗ್ಯ ಸರಿಯಾಗಿ ಇಲ್ಲದೇ ಇರುವ ಬಗ್ಗೆ ಬರೆಯಿಸಿದ್ದು ಅದರ ಬಗ್ಗೆ ನನಗೆ ಗೊತ್ತಿರುತ್ತದೆ. ಕೃಷ್ಣಪ್ಪ ನವರು ಆರೋಗ್ಯದ ಮಾಹಿತಿ ಇದ್ದರೂ ನಾನು ನ್ಯಾಯಾಲಯಕ್ಕೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ನಾನು, ಕೃಷ್ಣಪ್ಪ ಮತ್ತು ಶಂಕರೇಗೌಡರು ಮಾತ್ರ ಇದ್ದೇವು. ವಿಲ್ ಆಗಿರುವ ವಿಚಾರ ಕೃಷ್ಣಪ್ಪನವರಿಗೆ ಗೊತ್ತಿಲ್ಲ, ನಾನು ರಾಮಯ್ಯ ನವರ ಮಕ್ಕಳ ಜೊತೆ ಸೇರಿ ವಿಲ್ ನ್ನು ತಯಾರಿಸಿರುತ್ತೇನೆಂದರೆ ಸುಳ್ಳು.

ಈ ವಿಲ್ ಇರುವ ವಿಚಾರ ಅವರ ಕುಟುಂಬಕ್ಕೆ ಯಾವಾಗ ಗೊತ್ತಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಕೃಷ್ಣಪ್ಪನವರು ತೀರಿಕೊಂಡ ನಂತರ ಅವರ ತಿಥಿ , ಕಾರ್ಯಗಳಲ್ಲಿ ನಾನು ಭಾಗವಹಿಸಿರುತ್ತೇನೆ. ಕೃಷ್ಣಪ್ಪನವರು ವಿಲ್ ತಯಾರಿಸಿ ನಂತರ ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ, ಅವರು ಯಾವ ರೀತಿ ವಿಲ್ ತಯಾರಿ ಮಾಡಿರುತ್ತಾರೆ ಎಂದು ನನಗೆ ಹೇಳಿರುವುದಿಲ್ಲ, ನನ್ನ ತಂದೆಗೆ ಹೇಳಿರುತ್ತಾರೆ. ರಾಮಯ್ಯ ನವರ ಕುಟುಂಬ ಮತ್ತು ನನಗೆ ಎಷ್ಟು ವರ್ಷದ ಸ್ನೇಹ ಎಂದರೆ ಸಾಕ್ಷಿ ಅವರು ನಮ್ಮ ಹುಟ್ಟು ಊರಿನವರಾದ ಕಾರಣ ಅವರು ನನಗೆ ಪರಿಚಯ ಇರುತ್ತಾರೆಂದು ನುಡಿಯುತ್ತಾರೆ. ನನಗೆ ರಾಮಯ್ಯ ನವರ ಕುಟುಂಬ ಪರಿಚಯ ಇರುವುದರಿಂದ ಅವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರವನ್ನು ಯಾರು ತಯಾರು ಮಾಡಿರುತ್ತಾರೆ ಎಂದರೆ ಸಾಕ್ಷಿ ಯಾರು ತಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರದ ಮಾಹಿತಿ ನನಗೆ ಇದೆ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಇರುವ ವಿಚಾರವನ್ನು ಬರೆಯಲು ನಾನು ಯಾರಿಗೂ ವಿಷಯದ ಮಾಹಿತಿಯನ್ನು ನೀಡಿರುವುದಿಲ್ಲ.

**ಮರುವಿಚಾರಣೆ : ಇಲ್ಲ**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು, ಮಾಗಡಿ**